ನಮ್ಮ ಮನೆಗೇ ಬನ್ನಿ. ಬೊಂಡದ ನೀರಿನಂಥ (ಎಳನೀರಿನಂಥ) ನೀರಿದೆ ನಮ್ಮಲ್ಲಿ' ಎಂದು ಇಬ್ಬರನ್ನೂ ತನ್ನ ಮನೆಗೆ ಕರೆದೊಯ್ದಳು. ಆಕೆ ಈ ಬ್ರಾಹ್ಮಣರು ತಮ್ಮ ಮನೆಯೊಳಗೆ ಬರಲಾರರು ಎಂದುಕೊಂಡು ಚಾವಡಿಯಲ್ಲಿದ್ದ ಮುರುಕು ಬೆಂಚೊಂದನ್ನು ಅಂಗಳದಲ್ಲಿ ತಂದಿಟ್ಟು ತನ್ನ ಸೆರಗಿನಿಂದ ಅದರಲ್ಲಿದ್ದ ಧೂಳನ್ನು ಒರಸಿ 'ಕುಳಿತುಕೊಳ್ಳಿ' ಎಂದಳು. ಒಳಗೆ ಹೋಗಿ ತಾಮ್ರದ ಕೊಡಪಾನವೊಂದನ್ನು ಹೊರತಂದು ತಿಕ್ಕಿ ತೊಳೆದು ಗೋವಿಂದ ಭಟ್ಟರ ಮುಂದೆ ಕವುಚಿ ಇಟ್ಟು 'ತೆಗೆದುಕೊಳ್ಳಿ' ಎಂದಳು. ಭಟ್ಟರು ಬಾಯಮ್ಮ ತನ್ನ ಮಡಿಮೈಲಿಗೆಗೆ ಗೌರವ ಕೊಟ್ಟ ರೀತಿಗೆ ಬೆರಗಾಗಿ ಕೊಡಪಾನವನ್ನು ಬಾವಿಗೆ ಇಳಿಸಿ ನೀರು ಸೇದಿದರು. ಅಷ್ಟರಲ್ಲಿ ನತ್ತಲಾಬಾಯಿ ಉಳ್ಳಾಲ ಬೆಲ್ಲದ ನಾಲ್ಕು ಅಚ್ಚನ್ನು ಬಾಳೆ ಕೀತು (ಬಾಳೆಲೆ ತುಂಡು)ನಲ್ಲಿಟ್ಟುಕೊಂಡು ಹೊರಬಂದು 'ನಿಮಗೆ ಬೆಲ್ಲ ಇಲ್ಲದಿದ್ದರೂ ನಡೆದೀತು. ಆದರೆ ಈ ಮಗುವಿನ ಮುಖ ಎಷ್ಟು ಕೆಂಪಾಗಿದೆ ನೋಡಿ. ಅದು ಬೆಲ್ಲ ತಿಂದು ನೀರು ಕುಡಿಯಲಿ' ಎಂದು ಆ ಬೆಲ್ಲದಚ್ಚುಗಳನ್ನು ಬೆಂಚಿನ ಮೇಲಿಟ್ಟು ದೂರ ನಿಂತಳು.

ಗೋವಿಂದ ಭಟ್ಟರಿಗೆ ಆ ಬಾಯಮ್ಮನಲ್ಲಿದ್ದ ಮಾತೃತ್ವ ನೋಡಿ, 'ಎಷ್ಟೊಳ್ಳೆ ಹೆಣ್ಮಗಳು ಈಕೆ' ಎಂದು ಅನಿಸಿತು. ಅವರು 'ಒಂದು ಲೋಟ ಬೇಕಿತ್ತಲ್ಲಾ?' ಎಂದಾಗ ಬಾಯಮ್ಮ ಒಳಗೆ ಹೋಗಿ ತಂದುಕೊಟ್ಟಳು. ಇಬ್ಬರೂ ಆಕೆ ಕೊಟ್ಟ ಕಂಚಿನ ಲೋಟವನ್ನು ಕೊಡಪಾನದೊಳಗೆ ತುರುಕಿಸಿ ಮೂರು ನಾಲ್ಕು ಲೋಟ ನೀರು ಕುಡಿದರು. ಬೆಲ್ಲದಚ್ಚನ್ನೂ ಜಗಿದು ತಿಂದರು. ಆಕೆಗೆ ಕೃತಜ್ಞತೆಗಳನ್ನು ಹೇಳಿ ಅವರು ಹೊರಡಬೇಕೆನ್ನುವಾಗ ಇದಿರಿಗೆ ಬರುವ ವ್ಯಕ್ತಿಯನ್ನು ನೋಡಿದ ಶ್ರೀನಿವಾಸ, 'ಅಪ್ಪಾ, ಇವರು ನಮ್ಮ ಮೇಷ್ಟ್ರು' ಎನ್ನುತ್ತಾ ಮೇಷ್ಟ್ರಿಗೆ ಕೈಮುಗಿದ. ಶ್ರೀನಿವಾಸ ಕೈಮುಗಿದದ್ದಕ್ಕೆ ಪ್ರತಿ ನಮಸ್ಕರಿಸಿದ ಅವನ ಮೇಷ್ಟ್ರು 'ಇದೇನು ಈ ಬಿಸಿಲಿಗೆ ಇಲ್ಲಿ?' ಎಂದು ಪ್ರಶ್ನಿಸಿದರು. ಗೋವಿಂದಭಟ್ಟರು ಎಲ್ಲಾ ವಿಷಯವನ್ನು ಅವರಿಗೆ ವಿವರಿಸಿ, 'ಅಂತೂ ಈ ಮಾಣಿಗೆ ಓದುವ ಭಾಗ್ಯ ಇಲ್ಲ ಅಂತ ಆಯಿತು ಮೇಷ್ಟ್ರೆ' ಎಂದು ನಿಟ್ಟುಸಿರುಬಿಟ್ಟರು.

ಮೇಷ್ಟ್ರು ಗೋವಿಂದ ಭಟ್ಟರ ನೋವನ್ನು ಗಮನಿಸಿದರು. 'ಭಟ್ರೇ ನೀವೇನೂ ಚಿಂತಿಸುವುದು ಬೇಡ. ನಾನು ಓದಿದ್ದು ತುಮಕೂರಿನ ಸಿದ್ಧಗಂಗಾಮಠದಲ್ಲಿ. ಅಲ್ಲಿ ಬ್ರಾಹ್ಮಣ, ಶೂದ್ರ, ಕ್ರಿಶ್ಚಿಯನ್, ಮುಸ್ಲಿಂ ಎಂಬ ಭೇದಭಾವ ಇಲ್ಲ!. ಮನುಷ್ಯರೆಲ್ಲರೂ ಒಂದೇ ಜಾತಿ ಎಂದು ಅಣ್ಣ ಬಸವಣ್ಣ ಹೇಳಿದ್ದನ್ನು ಸಿದ್ಧಗಂಗಾಮಠದ ಸ್ವಾಮಿಗಳು ಅಕ್ಷರಶಃ ಪಾಲಿಸುತ್ತಾ ಬಂದಿದ್ದಾರೆ. ನಿಮ್ಮ ಈ ಹುಡುಗನಿಗೆ ಡಿಗ್ರಿ ಓದಲು ಅಲ್ಲಿ ಅವಕಾಶ ಖಂಡಿತ ಇದೆ' ಎಂದರು.

ಭಟ್ಟರಿಗೆ ಖುಷಿಯಾಯಿತು. ಅವರು 'ಸ್ವಾಮಿ ಮೇಷ್ಟ್ರೆ, ಅದು ನಿಜ ಇರಬಹುದು. ನಾನು ಮಂಗಳೂರು ಬಿಟ್ಟು ಬೆಂಗಳೂರಿಗೂ ಹೋದವನಲ್ಲ. ಇನ್ನು ಸಿದ್ಧಗಂಗಾ ಮಠವನ್ನು ಹುಡುಕುವುದು ಹೇಗೆ?' ಎಂದು ತನ್ನ ಅಸಹಾಯಕತೆ ವ್ಯಕ್ತಪಡಿಸಿದರು. ಮೇಷ್ಟ್ರು 'ಒಂದು ನೂರು ರೂಪಾಯಿ ನೀವು ಹೊಂದಿಸಿಕೊಡುವುದಾದರೆ ನಾನೇ ಇವನನ್ನು ಮಠಕ್ಕೆ ಕರೆದೊಯ್ದು ಎಲ್ಲಾ ವ್ಯವಸ್ಥೆ ಮಾಡುತ್ತೇನೆ. ನಾನು ಇವನಿಗೆ ಪಾಠ ಹೇಳಿದವನಲ್ಲವೇ?' ಎಂದು ಮುಗುಳ್ನಕ್ಕರು. 'ಈತ ತುಂಬಾ ಜಾಣನಿದ್ದಾನೆ. ಇವನ ಮುಂದಿನ ಓದಿಗೆ ಅವಕಾಶ ಇಲ್ಲವೆಂದು ಆಗಬಾರದು' ಎಂದೂ ಹೇಳಿದರು. ಆಮೇಲೆ 'ನಮ್ಮ ಹೈಸ್ಕೂಲಿನ ಹೆಡ್ಮಾಷ್ಟ್ರು ಪಾದ್ರಿಗಳು. ಅವರು ಇಂಥ ವಿಚಾರಕ್ಕೆ ಒಂದೆರಡು ದಿನಗಳ ರಜೆಯನ್ನು ಖಂಡಿತಾ ನನಗೆ ಮಂಜೂರು ಮಾಡುತ್ತಾರೆ' ಎಂಬ ಮಾತನ್ನೂ ಆಡಿದರು.

ಗೋವಿಂದ ಭಟ್ರು ಮೇಷ್ಟ್ರು ಚಂದ್ರಶೇಖರಪ್ಪನವರ ಎರಡೂ ಕೈಗಳನ್ನು ಹಿಡಿದು ತನ್ನ ಹಣೆಗೆ ಮುಟ್ಟಿಸಿಕೊಂಡರು. 'ನಾನು ಇವನನ್ನು ಹುಟ್ಟಿಸಿರಬಹುದು ಮೇಷ್ಟ್ರೆ. ಆದರೆ ನೀವು ಇವನಿಗೆ ಪುನರ್ಜನ್ಮ ನೀಡುವ ತಂದೆ' ಎಂದು ಅಭಿನಂದಿಸಿ, 'ಯಾವಾಗ ನಿಮ್ಮ ಸಿದ್ಧಗಂಗಾ ಮಠದ ಪಯಣ? ಎಂದು ತಿಳಿಸಿದರೆ, ನಾಳೆ ಬಂದು ನಿಮ್ಮನ್ನು ನೋಡುತ್ತೇನೆ' ಎಂದು ಕೈಮುಗಿದರು.

ಸಿದ್ಧಗಂಗಾ ಮಠದಲ್ಲಿ ಪದವಿ ಓದಿ ಮುಗಿಸಿದ ಮೇಲೆ ರಾಯರಿಗೆ ಇಂಗ್ಲಿಷಿನಲ್ಲಿ ಸ್ನಾತಕೋತ್ತರ ಅಧ್ಯಯನ ನಡೆಸಬೇಕೆಂದು ಕಂಡಿತು. ಆದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದುವುದಾದರೆ ಅಲ್ಲಿ ವ್ಯವಸ್ಥೆ ಹೇಗೆ ಎಂದುಕೊಳ್ಳುವಷ್ಟರಲ್ಲಿ ಕಣಪನಹಿತ್ಲಿನಿಂದ ಮೈಸೂರಿಗೆ ಹೋಗಿ ಹೋಟೆಲ್ ವ್ಯವಹಾರದಲ್ಲಿ ಮುಂದೆ ಬಂದಿದ್ದ ಗುರುರಾಜಾಚಾರ್ಯರ ನೆನಪು ಗೋವಿಂದಭಟ್ಟರಿಗೆ ಬಂತು. ಗೋವಿಂದ ಭಟ್ಟರು ಮಗ ಶ್ರೀನಿವಾಸನಲ್ಲಿ ಒಂದು ಪತ್ರವನ್ನು ಬರೆದುಕೊಟ್ಟು, 'ಇದನ್ನು ನೀನು ಗುರುರಾಜ ಆಚಾರ್ಯರಿಗೆ ಕೊಡು. ಅವರು ಖಂಡಿತ 'ಇಲ್ಲ' ಅನ್ನಲಾರರು. ಅವರ ಹೋಟೆಲಿನಲ್ಲೇ ಇದ್ದು ನೀನು ಓದುವುದು ಕಷ್ಟವಾದರೂ ಗುರಿ ಮುಟ್ಟಲಿಕ್ಕೆ ಎಂತೆಂಥ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ' ಎಂಬುದನ್ನು ಹೇಳಿ ಶ್ರೀನಿವಾಸನನ್ನು ಮೈಸೂರಿಗೆ ಕಳುಹಿಸಿಕೊಟ್ಟರು.

ಮ್ಯಾಟ್ರಿಕ್ ಓದು ಮುಗಿಯುವ ಮೊದಲೇ ರಾಯರ ಅಜ್ಜಿ ನಿಧನರಾಗಿದ್ದರು. ಹಾಗೇ ರಾಯರ ತಾಯಿ ಸೌಮ್ಯಳ ಆರೋಗ್ಯವೂ ರಾಯರು ಮೈಸೂರಿನಲ್ಲಿ ಓದುತ್ತಿರುವಾಗಲೇ ಹದಗೆಟ್ಟಿತ್ತು. ಆಕೆ 'ನೀನು ಚೆನ್ನಾಗಿ ಓದು ಮಗನೇ! ನನ್ನ ಬಗ್ಗೆ ಯಾವತ್ತೂ ಚಿಂತಿಸಬೇಡ. ನನ್ನ ಹೊಟ್ಟೆ ಬಟ್ಟೆಯ ಪ್ರಶ್ನೆಯನ್ನು ನಿನ್ನಪ್ಪ ಖಂಡಿತ ನೋಡಿಕೊಳ್ಳುತ್ತಾರೆ' ಎನ್ನುತ್ತಲೇ ಬಂದಿದ್ದಳು.

ರಾಯರಿಗೆ ಐದನೇ ತರಗತಿಯಲ್ಲಿ ಅಭ್ಯಾಸ ನಡೆಸುವಷ್ಟರ ತನಕ ತನ್ನ ಅಪ್ಪ ಯಾರು ಎಂಬ ಬಗ್ಗೆ ಖಚಿತವಾದ ಕಲ್ಪನೆ ಇರಲಿಲ್ಲ. ವಾರದಲ್ಲಿ ಒಂದೋ ಎರಡೋ ಸಲ ಸುಮ್ಮನೆ ತಮ್ಮ ಮನೆಗೆ ಬಂದು ಅಮ್ಮನಲ್ಲಿ ಪಟ್ಟಾಂಗ ಹೊಡೆದು ಹೋಗುತ್ತಿದ್ದ ಗೋವಿಂದ ಭಟ್ಟರು ಅಮ್ಮನಿಗೆ ತೀರಾ ಬೇಕಾದವರು ಎಂದಷ್ಟೇ ಆತನಿಗೆ ಗೊತ್ತಿತ್ತು. ಅಮ್ಮನೂ ಅಷ್ಟೇ, ಗೋವಿಂದ ಭಟ್ಟರ ಮನೆಗೆ ದಿನನಿತ್ಯ ಎಂಬಂತೆ ಹೋಗುವುದು, ಅಲ್ಲಿ ಒಂದಿಷ್ಟು ಸಮಯ ಕಳೆದು ಬರುವುದು ಮತ್ತು ಮರಳಿ ಬರುವಾಗ ಅಲ್ಲಿ ಶಂಕರಿ ಅಮ್ಮ ಕೈ ಎತ್ತಿಕೊಟ್ಟದ್ದನ್ನೆಲ್ಲ ಕೈತುಂಬ ತುಂಬಿ ತರುವುದು ನಡೆದೇ ಇತ್ತು. ಇದು ಯಾಕೆ ಅಥವಾ ಭಟ್ಟರು ತನಗೆ ಏನಾಗಬೇಕು ಎಂಬ ಪ್ರಶ್ನೆ ರಾಯರನ್ನು ಸದಾ ಕಾಡುತ್ತಲೇ ಇತ್ತು.

ಕಣಪನಹಿತ್ಲು ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಮೇಲೆ ಶಿರ್ವದ ಪ್ರೌಢಶಾಲೆಗೆ ರಾಯರನ್ನು ದಾಖಲಿಸಲು ಸೌಮ್ಯ ಹೋದಾಗ ಅಲ್ಲಿ ಮಗುವಿನ ತಂದೆಯ ಹೆಸರು ಎಂದಿರುವಲ್ಲಿ ಗೋವಿಂದ ಭಟ್ಟ ಎಂದು ತಾಯಿ ಬರೆಸಿದ್ದನ್ನು ನೋಡಿ ರಾಯರಿಗೆ ಆಶ್ಚರ್ಯವಾಗಿತ್ತು. ಆ ತನಕ ಭಟ್ಟರನ್ನು 'ಮಾವ' ಎನ್ನುತ್ತಲೇ ಸಂಬೋಧಿಸುತ್ತಿದ್ದ ರಾಯರು ಆ ರಾತ್ರೆ ಅಮ್ಮನ ಬಳಿ 'ಗೋವಿಂದ ಭಟ್ಟರು ನನ್ನ ಮಾವನೋ, ಅಪ್ಪನೋ ಯಾರು ಹೇಳಿ?' ಎಂದು ಗೊಂದಲದಲ್ಲೇ ಕೇಳಿದ್ದ. ಆಗ ಸೌಮ್ಯ ರಾಯರ ತಲೆನೇವರಿಸಿ 'ಎರಡೂ ಹೌದು' ಎಂದಿದ್ದಳು. ಆದರೆ ರಾಯರು ಸುಮ್ಮನಿರಲಿಲ್ಲ. ಎದ್ದು ಕುಳಿತ ಅವರು, 'ಮಾವ ಮತ್ತು ಅಪ್ಪ ಒಂದೇ ಆಗುವುದು ಹೇಗಮ್ಮಾ?' ಎಂದು ಪ್ರಶ್ನಿಸಿದ್ದರು. ಸೌಮ್ಯ, 'ಅದೆಲ್ಲ ದೊಡ್ಡ ಕತೆ. ನಿಜವಾಗಿಯೂ ಅವರು ನಿನ್ನ ಅಪ್ಪನೇ. ನಾನು ಅವರ ಎರಡನೇ ಹೆಂಡತಿ. ಶಂಕರಿ ಅಮ್ಮ ಇದ್ದಾರಲ್ಲ, ಅವರು ನಿನ್ನ ದೊಡ್ಡಮ್ಮ' ಎಂದು ರಾಯರನ್ನು ಸುಮ್ಮನಾಗಿಸಿದ್ದರು. ರಾಯರಿಗೆ ಆಗ ಅಮ್ಮನ ಈ ಸಂಬಂಧಗಳ ಕತೆ ಏನೂ ಅರ್ಥವಾಗಲಿಲ್ಲ. 'ನಾಳೆಯಿಂದ ನಾನು ಮಾವನನ್ನು ಅಪ್ಪ ಎಂದೇ ಕರೆಯುವುದಾ ಹೇಗೆ?' ಎಂದು ಆತ ತಾಯಿಯನ್ನು ಪ್ರಶ್ನಿಸಿದ್ದರು. ಆಗ ಸೌಮ್ಯ 'ಹೇಗೆ ಕರೆದರೂ ಅಡ್ಡಿಯಿಲ್ಲ' ಎಂದಿದ್ದಳು.

ರಾಯರಲ್ಲಿ ಸಣ್ಣಗೆ ಕಾಣಿಸಿಕೊಂಡ ತಲೆನೋವು ಅಷ್ಟರಲ್ಲಿ ಸ್ವಲ್ಪ ಜಾಸ್ತಿಯಾದಂತೆ ಆಯಿತು. ತಲೆಗೆ ಹಚ್ಚಲು ಏನಾದರೂ ಬಾಮ್ ಇದ್ದರೆ ಹಚ್ಚಿಕೊಳ್ಳಬಹುದಿತ್ತೋ ಏನೋ ಎಂದುಕೊಂಡ ಅವರು 'ಗಂಟೆ ಇನ್ನೂ ಆರು ಆಗಿಲ್ಲ. ಜಯಂತಿ ಮಲಗಿಯೇ ಇರಬಹುದು. ಅವಳನ್ನು ಯಾಕೆ ಈಗ ಎಬ್ಬಿಸಲಿ?' ಎಂದು ಮತ್ತೆ ಉದ್ದಕ್ಕೂ ಹಾಸಿಗೆಯಲ್ಲಿ ಕಾಲು ಚಾಚಿ ಮಲಗಿದರು. ಆದರೆ ತಲೆನೋವು ಜಾಸ್ತಿಯಾಗುತ್ತಲೇ ಹೋಯಿತು. ಜೊತೆಗೆ ಸಣ್ಣಗೆ ಚಳಿಯೂ ಕಾಣಿಸಿಕೊಂಡಿತು. ಸ್ವಲ್ಪ ಹೊತ್ತಿನಲ್ಲಿ ಅವರಿಗೆ ವಾಕರಿಕೆಯ ಅನುಭವವಾಗಿ, 'ಇನ್ನು ಜಯಂತಿಯನ್ನು ಕರೆಯದಿದ್ದರೆ ಸಾಧ್ಯವಿಲ್ಲ' ಎಂಬಂತಾಯಿತು. ರಾಯರು ನಿಧಾನವಾಗಿ ಎದ್ದು ಕುಳಿತು ಸಣ್ಣ ಸ್ವರದಲ್ಲಿ 'ಜಯಂತಿ ಜಯಂತಿ' ಎಂದು ಕೂಗಿದರು.

ರಾಯರು ಮಲಗಿದ್ದ ಕೋಣೆಗೆ ಸರೀ ಇದಿರಾಗಿ ಜಯಂತಿಯ ಬೆಡ್‌ರೂಮ್ ಇತ್ತು. ಅವಳಿಗೆ ತಾನು ಕೂಗುವುದು ಹೇಗೆ ಕೇಳಿಸುವುದು? ಎಂದುಕೊಳ್ಳುತ್ತಾ ರಾಯರು ಬೆಡ್‌ನಿಂದ ಮೆಲ್ಲನೆ ಕೆಳಗಿಳಿದು ನಿಧಾನವಾಗಿ ಜಯಂತಿಯ ರೂಮಿನಾಚೆ ನಡೆದು ಬಂದರು. ಜಯಂತಿ ತನ್ನ ರೂಮಿನ ಚಿಲಕ ಹಾಕಿರುತ್ತಾಳೆ ಎಂದುಕೊಂಡು ಬಾಗಿಲು ಬಡಿದರೆ